ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಬ್ಯಾಟರಾಯನಪುರ

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ಬ್ಯಾಟರಾಯನಪುರದ ಒಳನೋಟ

1. ಪ್ರದೇಶ: 68.5 sq. km

2. ಜನಸಂಖ್ಯೆ : 374299

3. ವಾರ್ಡ್ :ಜಕ್ಕೂರು, ತಣಿಸಂದ್ರ, ಬ್ಯಾಟರಾಯನಪುರ, ಕೊಡಿಗೆಹಳ್ಳಿ, ವಿದ್ಯಾರಣ್ಯಪುರ, ದೊಡ್ಡ ಬೊಮ್ಮಸಂದ್ರ, ಕುವೆಂಪುನಗರ

5. ಒಟ್ಟು ಗೃಹಗಳು : 90930

7. ರಸ್ತೆ ವಿಸ್ತೀರ್ಣ : 1088 km

8)ಕೆರೆಗಳು : ವೆಂಕಟೇಶಪುರ, ಚೊಕ್ಕನಹಳ್ಳಿ, ಜಕ್ಕೂರು, ಸಂಪಿಗೆಹಳ್ಳಿ, ಅಗ್ರಹಾರ, ತಿರುಮಲೇನಹಳ್ಳಿ ಬೆಲಹಳ್ಳಿ, ರಾಚೇನಹಳ್ಳಿ,ನಾಗವಾರ, ಅಮೃತಹಳ್ಳಿ ಹೆಬ್ಬಾಳ

9)ಆರಕ್ಷಕ ಠಾಣೆ : ಸಂಪಿಗೆಹಳ್ಳಿ, ಕೆ.ಜಿ ಹಳ್ಳಿ ಅಮೃತಹಳ್ಳಿ ಕೊಡಿಗೆಹಳ್ಳಿ ವಿದ್ಯಾರಣ್ಯಪುರ ಗಂಗಮ್ಮನಗುಡಿ

10. ಬಸ್ ನಿಲ್ದಾಣಗಳು : 181

11. ಅಗ್ನಿಶಾಮಕ ಕೇಂದ್ರ :1

12. ಸರ್ಕಾರಿ ಶಾಲೆಗಳು :44

13. ಆಟದ ಮೈದಾನ :18

14) ಪಾರ್ಕ್‌ಗಳು:159

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ದಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ದಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ಬ್ಯಾಟರಾಯನಪುರ

## ತ್ಯಾಜ್ಯ ನಿರ್ವಹಣೆ

1. ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

2. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ವರ್ಗಾಯಿಸಲು ಅನುಕೂಲವಾಗುವಂತೆ ವೈಜ್ಞಾನಿಕ ವರ್ಗ ಸ್ಥಳಗಳ ಸ್ಥಾಪನೆ

3. ಎಲ್ಲಾ ವಾರ್ಡ್‌ಗಳೂ ಸಹ ಚೆನ್ನಾಗಿ ಕಾರ್ಯನಿರ್ವಹಿಸುವಂತಹ ಒಣ ಕಸ ಸಂಗ್ರಹ ಕೇಂದ್ರಗಳನ್ನು ಹೊಂದಿರಬೇಕು

4. ಬ್ಯಾಟರಾಯನಪುರದಿಂದ ಸಂಗ್ರಹಿಸಿದಂತಹ ಹಸಿ ಮತ್ತು ಎಲೆ ಕಸವÀನ್ನು ಬ್ಯಾಟರಾಯನಪುರದಲ್ಲೇ ಸಂಸ್ಕರಿಸಲು ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯಾಗಬೇಕು.

5. ಬ್ಯಾಟರಾಯನಪುರದಲ್ಲಿ ನಿರ್ಮಾಣ ಹಂತದ ಅನೇಕ ಯೋಜನಾ ನಿವೇಶನಗಳಿದ್ದು ಅವುಗಳಿಂದ ಹೆಚ್ಚಿನ ಪ್ರಮಾಣದ ನಿರ್ಮಾಣ ಹಾಗೂ ಅವಶೇಷ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ ರೀತಿಯ ತ್ಯಾಜ್ಯ ನಿರ್ವಹಣೆಯ ಕುರಿತು ಜಾಗೃತಿ ಮತ್ತು ನಿರ್ಮಾಣ ಹಾಗೂ ಅವಶೇಷ ತ್ಯಾಜ್ಯ ಸಂಗ್ರಹ ಕೇಂದ್ರ ಸ್ಥಾಪನೆಯಂತಹ ಕ್ರಮಗಳ ಅಗತ್ಯವಿದೆ.

## ಸಂಚಾರ ಮತ್ತು ಸಾರಿಗೆ

1. ಹೊಸದಾಗಿ ಸೇರಿಸಲಾದ ಪ್ರದೇಶಗಳ ಸಂಭವನೀಯ ಬೆಳವಣಿಗೆಯನ್ನು ಗಮನದಲ್ಲಿ ಇರಿಸಿಕೊಂಡು ಬ್ಯಾಟರಾಯನಪುರಕ್ಕೆ ಸ್ಥಳೀಯ ಪ್ರದೇಶ ಸಾರಿಗೆ ಯೋಜನೆಯನ್ನು ಅಭಿವೃದ್ಧಿಪಡಿಸುವುದು.

2. ಬ್ಯಾಟರಾಯನಪುರದ ಆದ್ಯಂತ ಪಾದಚಾರಿ ಸ್ನೇಹಿ ಮತ್ತು ಒತ್ತುವರಿ ಮುಕ್ತ ಪಾದಚಾರಿ ಮಾರ್ಗ

3. ಸದಾ ದೊರೆಯಬಹುದಾದ ಹಾಗೂ ಕೈಗೆಟಕುವ ದರದ ಸಾರ್ವಜನಿಕ ಸಾರಿಗೆ ಮತ್ತು ಪ್ರಮುಖ ಪ್ರದೇಶಗಳಿಂದ ಕೊನೆಯ ಹಂತದವರೆಗೆ ಹಾಗೂ ಮೆಟ್ರೋ ಸ್ಟೇಷನ್‌ವರೆಗೆ ಸಂಪರ್ಕ ಅವಕಾಶಗಳು

4. ನಿರ್ದಿಷ್ಟವಾದ ರಸ್ತೆ ಕಾಮಗಾರಿ ಕೈಗೊಂಡ ಮಾಹಿತಿಯ ಪ್ರಸರಣ ಮತ್ತು ರಸ್ತೆ ಇತಿಹಾಸವನ್ನು ಪ್ರಕಟಿಸುವುದು.

5. ಸಾರ್ವಜನಿಕ ಪ್ರದೇಶದಲ್ಲಿನ ನಾಗರೀಕ ಸೌಕರ್ಯ ಜಾಗಗಳನ್ನು ಗುರುತಿಸಿದ ಕ್ಷೇತ್ರ ನಕ್ಷೆಯನ್ನು ಪ್ರಕಟಿಸುವುದು. ನಾಗರೀಕರ ಅವಶ್ಯಕತೆಗಳ ಆಧಾರದ ಮೇಲೆ ಸಾರ್ವಜನಿಕ ಜಾಗ ಉಪಯೋಗಕ್ಕೆ ಆದ್ಯತೆ ನೀಡಿಕೆ.

## ನೀರು

1. ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಹಲವು ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ಈ ಸಮಸ್ಯೆಯನ್ನು ಪರಿಹರಿಸಬೇಕಿದ್ದು ಎಲ್ಲಾ ಪ್ರದೇಶಗಳೂ ಒಳಚರಂಡಿ ವ್ಯವಸ್ಥೆಯನ್ನು ಹೊಂದಬೇಕು. ಇದಕ್ಕೆ ಸಂಬಂಧಿಸಿದಂತೆ ಯೋಜನೆಯ ವಿನ್ಯಾಸ, ಸ್ಥಿತಿಗತಿಯ ಮಾಹಿತಿಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

2. ಪ್ರತಿ ವ್ಯಕ್ತಿಗೆ ಪ್ರತಿ ನಿತ್ಯ 90ಲೀಟರ್ ನೀರಿಗೆ ಸಮನಾದಷ್ಟು ನೀರನ್ನು ಎಲ್ಲಾ ನಿವಾಸಿಗಳಿಗೆ ಸರಬರಾಜು ಮಾಡಬೇಕು.

3. ಬೇರೆ ಕ್ಷೇತ್ರಗಳಿಗಿಂತ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಕೆರೆಗಳಿವೆ. ಒತ್ತುವರಿಯನ್ನು ತಡೆಗಟ್ಟಿ ಕೆರೆಗಳನ್ನು ಪುನರುಜ್ಜೀವನಗೊಳಿಸಬೇಕಿದೆ.

4. ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಪದ್ಧತಿ ಅಳವಡಿಸಬೇಕು.

5. ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಅಭಿಯಾನವನ್ನು ನಡೆಸಬೇಕು ಮತ್ತು ಮಳೆನೀರು ಕೊಯ್ಲು ತಜ್ಞರು ಮತ್ತು ನೀರು ಉಳಿಸುವ ವಾಯುಪೂರಕ (ಏರೇಟರ್)ದÀಂತಹ ಸಾಧನಗಳ ಮಾಹಿತಿ ಸುಲಭವಾಗಿ ದೊರೆಯಲು ಕಿಯೋಸ್ಕ್‌ಗಳು ಲಭ್ಯವಾಗುವಂತೆ ಮಾಡಬೇಕು.

## ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ

1. ತಜ್ಞರು ಮತ್ತು ಕಾರ್ಯತಂತ್ರ ಪಾಲುದಾರರ ನೆರವಿನಿಂದ ಸರ್ಕಾರಿ ಶಾಲೆಗಳನ್ನು ಪುನರುಜ್ಜೀವನಗೊಳಿಸಬೇಕು ಮತ್ತು ಮಾದರಿ ಶಾಲೆಗಳನ್ನು ಸ್ಥಾಪಿಸಬೇಕು.

2. ಎಲ್ಲ ನಾಗರೀಕರಿಗೆ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

3. ವಿವಿಧ ರೀತಿಯ ಆದಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಸುರಕ್ಷತೆ ಮತ್ತು ಸಬಲೀಕರಣ ಸಂಪನ್ಮೂಲಗಳ ಕುರಿತು ಜಾಗೃತಿ ಬೆಳೆಸುವುದು

4. ಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಸಹಾಯಕ್ಕೆಂದೇ ಮೀಸಲಾದ ಆಪ್ತಸಮಾಲೋಚನಾ ಕೇಂದ್ರಗಳು

5. ವೃತ್ತಿಜೀವನ ನಿರ್ಮಾಣ ಅವಕಾಶಗಳಿಗಾಗಿ ಯುವ ಕಾಲೇಜು ವಿದ್ಯಾರ್ಥಿಗಳ ಮೇಲೆ ವಿಶೇಷ ಗಮನ

## ಪರಿಸರ ಮತ್ತು ಆರೋಗ್ಯ

1. ಹಸಿರು ಹೊದಿಕೆಯನ್ನು ಹೆಚ್ಚಿಸುವುದು ಮತ್ತು ಸೂಕ್ಷ್ಮವಾಗಿ ಮೇಲ್ವಿಚಾರಣೆ ಮಾಡುವುದು.

2. ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳಿಗೆ ಆದ್ಯತೆ

3. ಚೆನ್ನಾಗಿ ಕಾರ್ಯನಿರ್ವಹಿಸುವಂತಹ ಮತ್ತು ಸುಸಜ್ಜಿತವಾದಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ

4. ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯಗಳ ಲಭ್ಯತೆ ಮತ್ತು ಪಾರ್ಕ್‌ಗಳಲ್ಲಿ ಸ್ವಚ್ಛ ಶೌಚಾಲಯಗಳ ಸುಲಭ ಲಭ್ಯತೆಯ ತುರ್ತು ಅಗತ್ಯವಿದೆ.

5. ಟ್ರಾಫಿಕ್ ಜಂಕ್ಷನ್‌ಗಳಲ್ಲಿ ವಾಯು ಗುಣಮಟ್ಟ ಮತ್ತು ಗದ್ದಲ ಪ್ರಮಾಣದ ಮೇಲೆ ನಿಗಾ ಇರಿಸುವ ಸೂಚಕಗಳನ್ನು ಅಳವಡಿಸಬೇಕು